ಏಕಾಗ್ರಗೊಳಿಸುವುದು ಎಷ್ಟು ಅಭ್ಯಾಸವಾಗಿತ್ತೆಂದರೆ, ಅದು ನಿರಾಯಾಸವಾಗಿ ತನ್ಮಯತೆಯನ್ನು ಹೊಂದಿ ಶೀಘ್ರವೇ ಗುರಿ ಮುಟ್ಟುತ್ತಿತ್ತು. ಜಗನ್ಮಾತೆಯ ಆಣತಿಯಂತೆಯೆ ಮುಂದೆ ಆರಂಭಿಸಿದ ಉಳಿದ ಸಾಧನಾ ಪ್ರಕ್ರಿಯೆಗಳಲ್ಲಿ ಇಷ್ಟೊಂದು ವ್ಯಾಕುಲತೆ ಪಡಬೇಕಾದ, ದೀರ್ಘ ಹೋರಾಟವನ್ನು ಮಾಡಬೇಕಾದ ಆವಶ್ಯಕತೆ ಅವರಿಗೆ ತೋರಿಬರಲಿಲ್ಲ.

**ದಾಸ್ಯಭಾವ :** ಜಗನ್ಮಾತೆಯ ದರ್ಶನದ ನಂತರ ಅವರ ಮನಸ್ಸು ಕುಲದೇವತೆಯಾದ ರಘುವೀರನತ್ತ ಹೊರಳಿತು. ತಾವೇ ಶ್ರೀರಾಮನ ಭಕ್ತ ಹನುಮಂತನೆಂದು ಭಾವಿಸಿ, ವಾನರರಂತೆ ವರ್ತಿಸುತ್ತಿದ್ದರು; ಫಲಮೂಲಗಳನ್ನು ಸಿಪ್ಪೆ ಸಮೇತ ತಿನ್ನುತ್ತಿದ್ದರು; ಮರದ ಮೇಲೆ ಹೆಚ್ಚು ಕಾಲ ವಾಸ ಮಾಡುತ್ತಿದ್ದರು. ಸದಾ "ರಘುವೀರ, ರಘುವೀರ" ಎಂದು ಉಚ್ಚರಿಸುತ್ತಿದ್ದರು. ಅವರ ಕಣ್ಣುಗಳು ಕೆಂಪಾಗಿ ಸದಾ ಚಂಚಲವಾಗಿರುತ್ತಿದ್ದವು. ಪಂಚೆಯನ್ನು ಸೊಂಟದಿಂದ ಬಾಲದಂತೆ ಇಳಿಬಿಟ್ಟು ಉಡುತ್ತಿದ್ದರು, ನೆಗೆಯುತ್ತಾ ನಡೆಯುತ್ತಿದ್ದರು. ತೀವ್ರ ಭಾವನೆಯಿಂದ ದೈಹಿಕವಾಗಿಯೂ ಅವರಲ್ಲಿ ಎಂತಹ ಪರಿಣಾಮವಾಗಿತ್ತೆಂದರೆ ಅವರ ಬೆನ್ನುಮೂಳೆಯ ಕೊನೆಭಾಗವು ಒಂದಿಂಚಿನಷ್ಟು ಉದ್ದವಾಗಿಬಿಟ್ಟಿತ್ತು. ಈ ದಾಸ್ಯಭಾವದ ಸಾಧನೆಯಲ್ಲಿ ಅವರಿಗೆ ಬಿಟ್ಟ ಕಣ್ಣುಗಳಲ್ಲಿಯೇ ಸೀತೆಯ ದರ್ಶನವಾಯಿತು. ಮಂದಸ್ಮಿತಳಾಗಿ ಮಂದಗಮನೆಯಾಗಿ ಇವರೆಡೆಗೆ ನಡೆಯುತ್ತಾ ಬಂದ ಅವಳು, ಇವರ ದೇಹವನ್ನು ಪ್ರವೇಶಿಸಿದಳು. ಇದರಿಂದ ಶ್ರೀರಾಮಕೃಷ್ಣರು ಬಾಹ್ಯಶೂನ್ಯರಾದರು. ಕೇವಲ ಸ್ವಂತ ವೈಯಕ್ತಿಕ ಸಾಧನೆ ಮತ್ತು ವ್ಯಾಕುಲತೆಯ ಬಲದಿಂದ ಶ್ರೀರಾಮಕೃಷ್ಣರು ಸಿದ್ಧಿಯನ್ನು ಪಡೆದಿದ್ದರು. ಈಗ ಅವರು ಶಾಸ್ತ್ರವಾಕ್ಯ ಮತ್ತು ಇತರ ಮಹಾಪುರುಷರ ದರ್ಶನಗಳನ್ನು ತಮ್ಮ ಅನುಭವದೊಡನೆ ತಾಳೆ ಮಾಡಿಕೊಳ್ಳಬೇಕಾಗಿತ್ತು. ಅದನ್ನು ಅವರು ಶಾಸ್ತ್ರಗಳಲ್ಲಿ ಹೇಳಿರುವಂತೆ, ಗುರುವಿನ ಮಾರ್ಗದರ್ಶನದಲ್ಲಿ ಸಾಧನೆ ಮಾಡುವುದರ ಮೂಲಕ ಸಾಧಿಸಿದರು.

**ತಂತ್ರ ಸಾಧನೆಗಳು:** ಶ್ರೀರಾಮಕೃಷ್ಣರ ಸಾಧನಾಸಮಯದಲ್ಲಿ ಭೈರವಿ ಬ್ರಾಹ್ಮಣಿಯ ಪ್ರವೇಶವಾಯಿತು. ಆಕೆ ತಂತ್ರದ ೬೪ ವಿದ್ಯೆಗಳಲ್ಲೂ ಪರಿಣತಿಯನ್ನು ಹೊಂದಿದ್ದಳು. ಶ್ರೀರಾಮಕೃಷ್ಣರು ಭೈರವಿ ಬ್ರಾಹ್ಮಣಿಯ ನಿರ್ದೇಶನದಲ್ಲಿ ಶಾಸ್ತ್ರೋಕ್ತ ತಾಂತ್ರಿಕ ಸಾಧನೆಗೆ ತೊಡಗಿದರು. ಅವರಿಗಾಗಿ ಪಂಚಮುಂಡಾಸನದ ವೇದಿಕೆ ನಿರ್ಮಾಣವಾಯಿತು. ಈಗ ಅವರ ಮನಸ್ಸು ಗುರುವು ತಿಳಿಸಿದ ಮಾರ್ಗದಲ್ಲಿ ಏಕನಿಷ್ಠೆಯಿಂದ ಧಾವಿಸತೊಡಗಿತು. ಕೆಲವು ಬಾರಿ ಜಪಮಾಲೆ ತಿರುಗಿಸುವಷ್ಟರಲ್ಲಿ ಅವರಿಗೆ ಅಪೂರ್ವ ದರ್ಶನಗಳಾಗುತ್ತಿದ್ದವು; ಮನಸ್ಸು ಸಮಾಧಿಮಗ್ನವಾಗಿಬಿಡುತ್ತಿತ್ತು. ಭೈರವಿಯು ಇವರಿಂದ ಒಂದಾದ ಮೇಲೊಂದು ತಂತ್ರಸಾಧನೆಗಳನ್ನು ಮಾಡಿಸುತ್ತಾ ಹೋದಳು. ಶ್ರೀರಾಮಕೃಷ್ಣರು ಅತ್ಯಂತ ಕಠಿಣ ಸಾಧನೆಗಳನ್ನು ಕೂಡ, ಬಹಳ ಸುಲಭವಾಗಿ ಅನುಸರಿಸಿ, ಸಿದ್ಧಿಯನ್ನು ಹೊಂದಿ, ದಿವ್ಯಭಾವದಲ್ಲಿ ಲೀನವಾಗುತ್ತಿದ್ದರು. ಅನೇಕ ದೇವೀರೂಪಗಳ ದರ್ಶನವೂ ಅವರಿಗೆ ಆಗುತ್ತಿತ್ತು.

**ವೈಷ್ಣವ ಸಾಧನೆಗಳು:** ತಂತ್ರಸಾಧನೆಗಳು ಮುಗಿದನಂತರ ಶ್ರೀರಾಮಕೃಷ್ಣರು ವೈಷ್ಣವ ಸಾಧನೆಗಳ ಕಡೆ ಆಕರ್ಷಿತರಾದರು. ಭೈರವಿಯೇ ಅನೇಕ ರೀತಿಯ ವೈಷ್ಣವ ಸಾಧನೆಗಳನ್ನು ಶ್ರೀರಾಮಕೃಷ್ಣರಿಗೆ ತಿಳಿಸಿಕೊಟ್ಟಳು. ಶಾಂತ, ದಾಸ್ಯ ಮತ್ತು ಸಖ್ಯ ಭಾವದ ಸಾಧನೆಗಳನ್ನು ಶ್ರೀರಾಮಕೃಷ್ಣರು ತಾವಾಗಿಯೇ ಆರಂಭಿಸಿದರು. ಇಂಥ ಭಾವ ಉಂಟಾದಾಗಲೆಲ್ಲ ಆಯಾ ಭಾವದ ಸಾಧಕರು ಅವರ ಬಳಿ ಬರುತ್ತಿದ್ದರು. ರಾಮಾವತ ಸಂಪ್ರದಾಯಕ್ಕೆ ಸೇರಿದ ಒಬ್ಬ ಜಟಾಧಾರಿ ಸಾಧುವು ದಕ್ಷಿಣೇಶ್ವರಕ್ಕೆ ಬಂದನು. ಅವನ ಬಳಿ ರಾಮಲಾಲನ (ಬಾಲಕ ರಾಮ) ವಿಗ್ರಹವೊಂದಿತ್ತು. ಅವನು ಅದರ ಮೇಲೆ ಪಿತೃವಾತ್ಸಲ್ಯವನ್ನು ಹರಿಸುತ್ತಿದ್ದನು. ಆ ವಿಗ್ರಹವು ಸದಾ ಇವನ ಜೊತೆಗಿದ್ದು ಅದ್ಭುತ ದರ್ಶನಗಳನ್ನೀಯುತ್ತಿತ್ತು. ಆದರೆ, ಶ್ರೀರಾಮಕೃಷ್ಣರನ್ನು ನೋಡಿದ ಮೇಲೆ ಆ ದಿವ್ಯ ಶಿಶುವು ಅವರ ಬಳಿಯೇ ಹೆಚ್ಚು ಕಾಲ ಕಳೆಯುತ್ತಿತ್ತು. ಶ್ರೀರಾಮಕೃಷ್ಣರಿಂದ ರಾಮಲಾಲನು ಎಷ್ಟೊಂದು ಆಕರ್ಷಿತನಾಗಿಬಿಟ್ಟನೆಂದರೆ, ಜಟಾಧಾರಿ ಬಾಬಾಜಿಯು ಅಳುತ್ತಾ ಬಂದು, "ಇನ್ನು ಮುಂದೆ ರಾಮಲಾಲನು ನಿಮ್ಮೊಡನೆಯೇ ಇರುವನಂತೆ, ನನ್ನ ಸಾಧನೆಯು ಪೂರೈಸಿತು" ಎಂದು ಹೇಳಿ ಹೊರಟುಹೋದನು.

ಇದಾದ ಮೇಲೆ ಶ್ರೀರಾಮಕೃಷ್ಣರು ವೈಷ್ಣವ ಮಧುರಭಾವ ಸಾಧನೆಯನ್ನು ಮಾಡಿದರು. ತಮ್ಮನ್ನು ರಾಧೆಯೆಂದು ಭಾವಿಸಿ, ಶ್ರೀಕೃಷ್ಣನ ಪ್ರೇಮದಲ್ಲಿ ತಮ್ಮ ಅಸ್ತಿತ್ವವನ್ನೇ ಮರೆತುಬಿಟ್ಟರು. ಅವರಲ್ಲಿ ಸ್ತ್ರೀ, ಪುರುಷ – ಈ ಎರಡೂ ಭಾವಗಳ ಸುಮಧುರ ಸಂಗಮ ಉಂಟಾಗಿತ್ತು. ಈ ಸಾಧನೆಯ ಸಮಯದಲ್ಲಿ, ಸ್ತ್ರೀವೇಷಭೂಷಣಗಳನ್ನು ಧರಿಸಿ, ಸ್ತ್ರೀಯಂತೆಯೇ ಅವರು ವರ್ತಿಸುತ್ತಿದ್ದರು. ಆ ಅವಧಿಯಲ್ಲಿ, ಮಥುರಬಾಬುವಿನ ಮನೆಯ ಕುಲೀನ ಸ್ತ್ರೀಯರಿಗೆ ಅವರು ಪುರುಷರೆಂದು ಅನ್ನಿಸುತ್ತಲೇ ಇರುತ್ತಿರಲಿಲ್ಲ. ಕೃಷ್ಣನ ಪ್ರೇಮದರ್ಶನಕ್ಕೆ ಹಂಬಲಿಸಿ, ತೀವ್ರ ಮಾನಸಿಕ ವೇದನೆಯಿಂದ ಅವರ ದೇಹದ ಮೇಲೆ ಅನೇಕ ಉತ್ಕಟ ಪರಿಣಾಮಗಳು ಉಂಟಾಗುತ್ತಿದ್ದವು. ದೇಹದ ರೋಮರೋಮಗಳಿಂದ ರಕ್ತ ಒಸರುತ್ತಿತ್ತು. ಹೀಗೆ ಅವರಲ್ಲಿ ರಾಧೆಗೆ ಬಂದಂತಹ ಮಹಾಭಾವದ ಲಕ್ಷಣಗಳು ಸ್ಪಷ್ಟವಾಗಿ ಕಾಣಿಸಲಾರಂಭಿಸಿದವು. ತಮ್ಮ ದೇಹವನ್ನು ನಿರ್ದೇಶಿಸಿ ಹೇಳುತ್ತಿದ್ದರು, "ಇಲ್ಲಿ (ವೈಷ್ಣವ ಸಾಧನೆಯ) ಹತ್ತೊಂಬತ್ತು ಭಾವಗಳೂ ಪೂರ್ಣವಾಗಿ ಪ್ರಕಾಶಗೊಂಡಿವೆ" ಎಂದು.

**ಅದ್ವೈತಸಾಧನೆ:** ಮಧುರಭಾವವು ಭಾವಸಾಧನೆಯ ಅಂತಿಮ ಸೀಮಾರೇಖೆ. ಈಗ ಶ್ರೀರಾಮಕೃಷ್ಣರಿಗೆ, ಕೇವಲ ಭಾವಾತೀತ ಅದ್ವೈತಸ್ಥಿತಿಯ ಅನುಭವವಾಗುವುದು ಮಾತ್ರ ಬಾಕಿಯಿತ್ತು. ಆ ಸಮಯಕ್ಕೆ ಸರಿಯಾಗಿ ಜಟಾಜೂಟಧಾರಿಯೂ ದೀರ್ಘಕಾಯನೂ ದಿಗಂಬರನೂ ಅದ್ವೈತಸಿದ್ಧಪುರುಷನೂ ಆದ ತೋತಾಪುರಿಯೆಂಬ ಸಂನ್ಯಾಸಿ ಅಲ್ಲಿಗೆ ಬಂದ. ವೇದಾಂತಸಾಧನೆಗೆ ಅವಶ್ಯಕವಾದ ಸಂನ್ಯಾಸದೀಕ್ಷೆಯನ್ನು, ಶಾಸ್ತ್ರೋಕ್ತವಾಗಿ ಆತ್ಮಶ್ರಾದ್ಧ, ವಿರಜಾಹೋಮ ಮುಂತಾದ ವಿಧಿಗಳ ಮೂಲಕ ಶ್ರೀರಾಮಕೃಷ್ಣರಿಂದ ಮಾಡಿಸಿದ. ಸಂನ್ಯಾಸದೀಕ್ಷೆಯ ನಂತರ ಶ್ರೀರಾಮಕೃಷ್ಣರು ಕೌಪೀನ ಧರಿಸಿ, ಕಾಷಾಯ ವಸ್ತ್ರವುಟ್ಟು, ಗುರುವಿನ ಮುಂದೆ ಕುಳಿತುಕೊಂಡರು. ತೋತಾಪುರಿಯು 'ನೇತಿ, ನೇತಿ' ಮಾರ್ಗದ ಮೂಲಕ ಇವರ ಮನಸ್ಸನ್ನು ನಿರ್ಗುಣ ನಿರಾಕಾರ ಬ್ರಹ್ಮಸ್ವರೂಪವನ್ನರಿಯಲು ಪ್ರೇರೇಪಿಸಿದ. ಪರಬ್ರಹ್ಮಸಂಬಂಧಿತ ವೇದಾಂತ ವಾಕ್ಯಗಳನ್ನು ಅವನು ಉಚ್ಚರಿಸುತ್ತಿದ್ದ ಹಾಗೆಯೇ ಶ್ರೀರಾಮಕೃಷ್ಣರು ಗಾಢ ಧ್ಯಾನಮಗ್ನರಾದರು.

ತೋತಾಪುರಿಯು ಈಗ ಆತ್ಮಧ್ಯಾನದಲ್ಲಿ ಮುಳುಗಲು ಶ್ರೀರಾಮಕೃಷ್ಣರಿಗೆ ಆದೇಶವಿತ್ತ. ಆದರೆ ಜಗನ್ಮಾತೆಯ ಚಿನ್ಮಯಮೂರ್ತಿಯು ಈ ಮಾರ್ಗದಲ್ಲಿ ಅಡ್ಡ ಬರುತ್ತಿತ್ತು. ಶ್ರೀರಾಮಕೃಷ್ಣರು ಹಾಗೆ ಹೇಳಿಕೊಂಡಾಗ, ತೋತಾಪುರಿಯು ರೇಗಿ, ಅಲ್ಲೇ ಬಿದ್ದಿದ್ದ ಒಂದು ಗಾಜಿನ ಚೂರನ್ನು ಅವರ ಭ್ರೂಮಧ್ಯಕ್ಕೆ ಚುಚ್ಚಿ, ಅಲ್ಲಿಯೇ ಮನಸ್ಸನ್ನು ನಿಲ್ಲಿಸಲು ಹೇಳಿದ. ಹೀಗೆ ಮಾಡಿದಾಗ, ಶ್ರೀರಾಮಕೃಷ್ಣರ ಮನಸ್ಸು ಅತಿಬೇಗ ನಿರಾಕಾರದೆಡೆಗೆ ಧಾವಿಸಿತು. ತಮ್ಮ ಆಂತರ್ಯದಲ್ಲಿ ಜ್ಞಾನಖಡ್ಗದ ಮೂಲಕ ನಾಮರೂಪಾತ್ಮಕವಾದ ಚಿನ್ಮಯಮೂರ್ತಿಯನ್ನು ಅವರು ಕತ್ತರಿಸಿಬಿಟ್ಟರು. ನಿರ್ವಿಕಲ್ಪ ಸಮಾಧಿಯನ್ನು ಹೊಂದಿ ಮೂರು ದಿವಸಗಳ ಕಾಲ ನಿರಂತರವಾಗಿ ಬ್ರಹ್ಮಲೀನವಾಗಿಬಿಟ್ಟರು. ತೋತಾಪುರಿಗೆ ಪರಮಾಶ್ಚರ್ಯ, "ಯಾವುದನ್ನು ನಾನು ನಲವತ್ತು ವರ್ಷಗಳ ತೀವ್ರ ಹೋರಾಟದ ನಂತರ ಪಡೆದಿದ್ದೆನೋ, ಅದನ್ನು ನನ್ನ ಶಿಷ್ಯನು ಒಂದು ದಿವಸದಲ್ಲಿಯೇ ಪಡೆದುಬಿಟ್ಟನಲ್ಲ!" ಎಂದು.

**ಇಸ್ಲಾಂ ಸಾಧನೆ:** ಶ್ರೀರಾಮಕೃಷ್ಣರು ಮುಂದೆ ಗೋವಿಂದರಾಯನೆಂಬ ಸೂಫೀ ಸಾಧಕನ ಮಾರ್ಗದರ್ಶನದಲ್ಲಿ ಇಸ್ಲಾಂ ಧರ್ಮದ ಸಾಧನೆಯನ್ನು ಆರಂಭಿಸಿದರು. "ಅಲ್ಲಾಹು"ವಿನ ಮಂತ್ರವನ್ನು ಜಪಿಸುತ್ತಾ, ಮುಸ್ಲಿಮರಂತೆಯೇ ಉಡುಪು ಧರಿಸಿ ನಮಾಜ್ ಮಾಡುತ್ತಿದ್ದರು. ಕೇವಲ ಮೂರು ದಿವಸಗಳಲ್ಲಿಯೇ ಅವರಿಗೆ ತಮ್ಮ ಸಾಧನೆಯ ಫಲ ಲಭಿಸಿತು. ನೀಳವಾದ ಗಡ್ಡದಿಂದ ಕೂಡಿದ ಗಂಭೀರಭಾವದ ಜ್ಯೋತಿರ್ಮಯ ಪುರುಷನೊಬ್ಬನ ದರ್ಶನವನ್ನು ಅವರು ಪಡೆದುಕೊಂಡರು. ನಿರಾಕಾರ ಸಗುಣ ಬ್ರಹ್ಮನ ಸಾಕ್ಷಾತ್ಕಾರದ ಮೂಲಕ, ನಿರ್ಗುಣ ಬ್ರಹ್ಮನಲ್ಲಿ ಅವರ ಮನಸ್ಸು ಲೀನವಾಗಿ ಹೋಯಿತು.

**ಕ್ರೈಸ್ತ ಧರ್ಮದ ಸಾಧನೆ:** ಕೊನೆಗೆ ಅವರು ವಿಶೇಷವಾಗಿ ಕ್ರೈಸ್ತಧರ್ಮದಲ್ಲಿ ತಮ್ಮ ಮನಸ್ಸನ್ನು ತೊಡಗಿಸಿಕೊಂಡರು. ಭಕ್ತ ಶಂಭುಚರಣ ಮಲ್ಲಿಕನ ಮೂಲಕ, ಬೈಬಲ್‌ನಲ್ಲಿ ದಾಖಲಾಗಿರುವ ಏಸುಕ್ರಿಸ್ತನ ಪವಿತ್ರಜೀವನದ ಮಾಹಿತಿ ಪಡೆದರು. ಯದು ಮಲ್ಲಿಕನ ತೋಟದ ಮನೆಯ ಬೈಠಕ್‌ಖಾನೆಯಲ್ಲಿ ಮೆಡೊನಾ ಮತ್ತು ಮಗುವಿನ ಚಿತ್ರವನ್ನು ತನ್ಮಯರಾಗಿ ನೋಡುತ್ತಿದ್ದಂತೆ, ಇಡೀ ಚಿತ್ರವು ಜ್ಯೋತಿರ್ಮಯವಾಗಿ ಅವರಿಗೆ ಕಂಡಿತು. ಆ ದಿವ್ಯಮಾತೆ ಮತ್ತು ದಿವ್ಯಶಿಶುವಿನ ದೇಹದಿಂದ ಹೊರಹೊಮ್ಮಿದ ಜ್ಯೋತಿಯು ಶ್ರೀರಾಮಕೃಷ್ಣರ ದೇಹವನ್ನು ಪ್ರವೇಶಿಸಿತು. ಹಿಂದೂ ಸಂಸ್ಕಾರಗಳೆಲ್ಲ ಹಿಂದೆ ಸರಿದು ಹೊಸ ಸಂಸ್ಕಾರ ಉಂಟಾಯಿತು. ಇದಾದ ಮೇಲೆ ಕೆಲವು ದಿನಗಳ ಕಾಲ ಶ್ರೀರಾಮಕೃಷ್ಣರು ಕಾಳೀ ದೇವಾಲಯಕ್ಕೂ ಹೋಗುತ್ತಿರಲಿಲ್ಲ. ಒಂದು ಚರ್ಚ್‌ನಲ್ಲಿ ಕ್ರಿಸ್ತನ ವಿಗ್ರಹ, ಅದರ ಮುಂದೆ ಪಾದ್ರಿಗಳು ಧೂಪ ದೀಪಗಳನ್ನು ಬೆಳಗುವುದು, ಅವರು ಕ್ರಿಸ್ತನನ್ನು ಪ್ರಾರ್ಥಿಸುವುದು – ಇವೇ ಮುಂತಾದ ದರ್ಶನಗಳು ಅವರಿಗೆ ಆಗುತ್ತಿದ್ದವು. ಮೂರು ದಿವಸಗಳವರೆಗೆ ಅವರು ಈ ಭಾವಸ್ಥಿತಿಯಲ್ಲಿದ್ದರು. ಒಂದು ದಿನ ದಿವ್ಯಪುರುಷರೊಬ್ಬನು ನೆಟ್ಟದೃಷ್ಟಿಯಿಂದ ಶ್ರೀರಾಮಕೃಷ್ಣರನ್ನೇ ನೋಡುತ್ತ ಅವರ ಕಡೆ ಗಂಭೀರವಾಗಿ ನಡೆದುಬರುತ್ತಿದ್ದಾನೆ. ಅವನ ಕಣ್ಣುಗಳು ವಿಶಾಲವಾಗಿದ್ದವು, ಮೈಬಣ್ಣ ಬಿಳುಪಾಗಿತ್ತು ಮತ್ತು ಅವನ ಶರೀರದಲ್ಲಿ ಅಪೂರ್ವ ಶೋಭೆಯಿತ್ತು. ಇವನೇ ದಯಾಮಯನಾದ ಏಸುಕ್ರಿಸ್ತ. ಅವನು ಶ್ರೀರಾಮಕೃಷ್ಣರನ್ನು ಆಲಿಂಗಿಸಿ ಅವರಲ್ಲಿಯೇ ಲೀನವಾದನು. ಹೀಗೆ ಕ್ರಿಸ್ತನು ಅವತಾರಪುರುಷನೆಂದು ಶ್ರೀರಾಮಕೃಷ್ಣರು ಸಾಬೀತು ಪಡಿಸಿದರು.

**ಸಾಧನೆಯ ಸಮಾಪ್ತಿ :** ತಮ್ಮ ಪತ್ನಿಯಾದ ಶ್ರೀಶಾರದಾದೇವಿಯವರನ್ನೇ 'ಷೋಡಶಿ' ಎಂದು ಪೂಜಿಸುವುದರೊಂದಿಗೆ ಶ್ರೀರಾಮಕೃಷ್ಣರ ಸಾಧನೆಯು ಪರಿಸಮಾಪ್ತಿಯಾಯಿತು. ಆ ಸಮಯದಲ್ಲಿ ಅವರು ತಮ್ಮ ಜಪಮಾಲೆಯನ್ನು ಸಲ್ಲಿಸುವ ಮೂಲಕ, ತಮ್ಮ ಸಾಧನೆಯ ಫಲವೆಲ್ಲವನ್ನೂ ದೇವಿಗೆ ಸಮರ್ಪಿಸಿಬಿಟ್ಟರು. ತಮ್ಮ ಅವತಾರೋದ್ದೇಶವಾದ ಮಾನವತ್ವದಿಂದ ದೈವತ್ವಕ್ಕೇರುವ, ಈ ದೇಹದಲ್ಲಿಯೇ ಪೂರ್ಣತ್ವವನ್ನು ಪಡೆಯುವ ಸಾಧನಾಪ್ರಕ್ರಿಯೆಯು ಈ ಮೂಲಕ ಪರಿಸಮಾಪ್ತಿಯಾಯಿತು. ಧಾರ್ಮಿಕ ಜೀವನವೇ ಉಸಿರಾದ ಭಾರತೀಯರ ಇತಿಹಾಸದಲ್ಲಿ, ಒಂದು ಯುಗದಲ್ಲಿ ಮಾಡಬಹುದಾದಂತಹ ಸಾಧನೆಯನ್ನು ಒಂದೇ ಜೀವನದಲ್ಲಿ ಸಾಧಿಸಿದ ಯುಗಪುರುಷರಾದ ಶ್ರೀರಾಮಕೃಷ್ಣರು ಅವತಾರವರಿಷ್ಠರಲ್ಲದೆ ಮತ್ತೇನು? •

# ಶ್ರೀರಾಮಕೃಷ್ಣರ 'ಗುರುಭಾವ'


ಸ್ವಾಮಿ ಗಿರಿಜಾತ್ಮಾನಂದ

**ಅ**ನಂತಭಾವಮಯರಾದ ದಕ್ಷಿಣೇಶ್ವರದ ದೇವ ಮಾನವ ಶ್ರೀರಾಮಕೃಷ್ಣರಿಗೆ ಇಂದು ಜಗತ್ತಿನಾದ್ಯಂತ "ಜೈ ಶ್ರೀ ಗುರುಮಹಾರಾಜ್ ಜೀ ಕೀ, ಜೈ" ಎಂದೇ ಭಕ್ತಾದಿಗಳು ಜೈಕಾರ ಮಾಡುತ್ತಿದ್ದಾರೆ. ಯಾರಾದರೂ ಗುರು, ತಂದೆ ಇತ್ಯಾದಿ ಶಬ್ದಗಳಿಂದ ಅವರನ್ನು ಸಂಬೋಧಿಸಿದರೆ, ಶ್ರೀರಾಮಕೃಷ್ಣರು ಅದನ್ನು ಸ್ವೀಕರಿಸದೆ ತಕ್ಷಣ ಪ್ರತಿಯಾಗಿ ಹೇಳುತ್ತಿದ್ದರು, "ಭಗವಂತನೇ ಎಲ್ಲರ ಗುರು, ತಂದೆ. ನನ್ನ ಶಿಷ್ಯನೆಂಬುವವನು ಈ ಮೂರು ಲೋಕದಲ್ಲಿಯೂ ಇಲ್ಲ. ಬದಲಾಗಿ ನಾನೇ ಎಲ್ಲರ ಶಿಷ್ಯ, ದಾಸ." ಅಂಥ ಶ್ರೀರಾಮಕೃಷ್ಣರಿಗೆ, ಅವರ ಹೆಸರಿನಿಂದ ಜೈಕಾರ ಮಾಡದೆ, 'ಗುರು ಮಹಾರಾಜ್' ಎಂದು ಜೈಕಾರ ಮಾಡುವುದರ ಉದ್ದೇಶವಾದರೂ ಏನಿರಬಹುದು?

ಶ್ರೀರಾಮಕೃಷ್ಣರನ್ನು 'ಅವತಾರವರಿಷ್ಠ' ಎಂಬುದಾಗಿ ಸ್ವಯಂ ಸ್ವಾಮಿ ವಿವೇಕಾನಂದರೇ ಘೋಷಿಸಿದ್ದಾರೆ. ಶ್ರೀರಾಮ, ಶ್ರೀಕೃಷ್ಣ, ಬುದ್ಧ, ಕ್ರಿಸ್ತ ಇತ್ಯಾದಿ ಅವತಾರಗಳಿಗಿಂತಲೂ ಶ್ರೀರಾಮಕೃಷ್ಣರಿಗೆ ಹೀಗೆ ಹೆಚ್ಚಿನ ಮನ್ನಣೆಯನ್ನು ನೀಡಿದಂತಾಯಿತು. ಇದು ಪ್ರತ್ಯೇಕವಾಗಿ ಪರಿಶೀಲಿಸಿ ತಿಳಿದುಕೊಳ್ಳಬೇಕಾದ ವಿಚಾರ. ಶ್ರೀರಾಮಕೃಷ್ಣರ ಜೀವನದ ಮಹತ್ವವನ್ನು ಅರಿಯಬೇಕಾದರೆ ಮೊದಲು ಭಾರತದ ಆಧ್ಯಾತ್ಮಿಕ ಪರಂಪರೆ ಮತ್ತು ಸಾಮಾಜಿಕ ಚರಿತ್ರೆಗಳನ್ನು ತಿಳಿದಿರಬೇಕಾದ್ದು ಮುಖ್ಯ. ಆಗಮಾತ್ರವೇ, ಶ್ರೀರಾಮಕೃಷ್ಣರನ್ನು ಈ ಆಧುನಿಕ ಅವತಾರವಾಗಿ ಪಡೆದ ನಾವೆಷ್ಟು ಭಾಗ್ಯಶಾಲಿಗಳೆಂದು ತಿಳಿದುಬರುವುದು. ಶ್ರೀರಾಮಕೃಷ್ಣರಲ್ಲಿ ಪ್ರಕಟವಾದ ಆ ಧರ್ಮಸಂಸ್ಥಾಪಕ ಗುರುಶಕ್ತಿ ಸನಾತನ ಧರ್ಮವನ್ನು ಪುನರ್‌ಜಾಗೃತಗೊಳಿಸಿದೆ; ಸಮಾಜದ ಎಲ್ಲ ವರ್ಗದ ಜನರಿಗೆ ಅಧ್ಯಾತ್ಮವನ್ನು ಸುಲಭಗ್ರಾಹ್ಯವನ್ನಾಗಿಸಿದೆ.

ಶ್ರೀರಾಮಕೃಷ್ಣರ ಬಾಲ್ಯದ ಹೆಸರು ಗದಾಧರ. ಬಾಲ್ಯದಲ್ಲಿಯೇ ಅವನಲ್ಲಿ ಗುರುಶಕ್ತಿಯು ಅದ್ಭುತವಾದ ರೀತಿಯಲ್ಲಿ ಕಾರ್ಯವೆಸಗುತ್ತಿತ್ತು. ಹಲವಾರು ಸಂದರ್ಭಗಳಲ್ಲಿ ಅವನು ತೆಗೆದುಕೊಳ್ಳುತ್ತಿದ್ದ ನಿರ್ಧಾರಗಳು ಅತ್ಯಂತ ಸಮಂಜಸ ಮತ್ತು ನವನೂತನವಾಗಿರುತ್ತಿದ್ದವು. ಅದನ್ನು ಪುಷ್ಟೀಕರಿಸುವ ನಿದರ್ಶನಗಳು ಹೀಗಿವೆ:

**ಶ್ರೀರಾಮಕೃಷ್ಣರ ಸಾಧಕಭಾವದಿಂದ ಸಹಜವಾಗಿಯೇ ಒಡಮೂಡಿದ ದೈವೀಭಾವವೆಂದರೆ 'ಗುರುಭಾವ.' ಭಗವಂತನ ಅನುಕಂಪವು ಜ್ಞಾನಪ್ರದ ರೂಪದಲ್ಲಿ ಹರಿದುಬಂದುದೇ ಗುರುಶಕ್ತಿ ಎನ್ನಿಸಿಕೊಳ್ಳುತ್ತದೆ. ಅದು ಶ್ರೀರಾಮಕೃಷ್ಣ ಅವತಾರದಲ್ಲಿ ಉಲ್ಲಾಸಮಯ ರೂಪದಲ್ಲಿ ಪ್ರಕಟಗೊಂಡಿತು. ಇದರ ಹತ್ತುಹಲವು ಮಜಲುಗಳನ್ನು ಸರಳವಾಗಿ ನಿದರ್ಶನಗಳ ಮೂಲಕ ಚಿತ್ರಿಸಿರುವ ಸ್ವಾಮೀಜಿಯವರು ಬೆಂಗಳೂರಿನಲ್ಲಿರುವ ರಾಮಕೃಷ್ಣ ಮಠದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.**



೧. ಗದಾಧರ ಸಂಪ್ರದಾಯಬದ್ಧ ಬ್ರಾಹ್ಮಣ ಕುಲದವನು. ಅವನು ತನ್ನ ಉಪನಯನದ ನಂತರ ಪ್ರಥಮ ಭಿಕ್ಷೆಯನ್ನು ಕೆಳಜಾತಿಯ ಧನಿ ಕಾಮಾರಿಣಿ ಎಂಬ ಕೆಲಸಗಾರ ಮಹಿಳೆಯಿಂದ ಸ್ವೀಕರಿಸಲು ಮುಂದಾದುದು ಮತ್ತು ವಚನಬದ್ಧನಾಗಿ ಅದನ್ನು ಕಾರ್ಯರೂಪಕ್ಕೆ ತಂದದ್ದು, ಆತನ ಮುಂದಿನ ಜೀವನದಲ್ಲಿ ಪ್ರಕಟವಾದ ಮಹಾತ್ಮೆಯ ದ್ಯೋತಕವಾಗಿದೆ.

೨. ಒಂದು ದಿನ ಬಿಸಿಬಿಸಿಯಾದ ವಾಗ್ಯುದ್ಧದಲ್ಲಿ ಪಂಡಿತ ಮಹಾಶಯರೆಲ್ಲ ವ್ಯಸ್ತರಾಗಿದ್ದರು. ಜೊತೆಗೆ ಮಹಿಳೆಯರ ತಂಡವೊಂದು ಗಂಭೀರವಾಗಿ ಇದನ್ನೇ ನೋಡುತ್ತಿದ್ದರೆ, ಮಕ್ಕಳೆಲ್ಲ ತಮ್ಮ ತಮ್ಮ ಚೇಷ್ಟೆ ಕುಚೇಷ್ಟೆಗಳಲ್ಲಿ ತೊಡಗಿದ್ದರು. ಗದಾಧರನೂ ಅಲ್ಲಿ ಉಪಸ್ಥಿತನಿದ್ದನು. ಪಂಡಿತರಲ್ಲೇ ಎರಡು ಮೂರು ಗುಂಪುಗಳಾಗಿ, ಹಿಂದೂ ಧರ್ಮಶಾಸ್ತ್ರದ ಯಾವುದೋ ಒಂದು ಜಟಿಲ ಪ್ರಶ್ನೆಗೆ ಉತ್ತರವನ್ನು ಕಾಣದೆ ಅವರೆಲ್ಲ ಒದ್ದಾಡುತ್ತಿದ್ದರು. ಗದಾಧರನು ಆ ಪ್ರಶ್ನೆಗೆ ಉತ್ತರವನ್ನು ತನ್ನ ಅಂತಃಪ್ರೇರಣೆಯಿಂದ ತಿಳಿದನು. ತಕ್ಷಣವೇ ಹತ್ತಿರದಲ್ಲಿದ್ದ ಪಂಡಿತನೊಬ್ಬನ ಕಿವಿಯಲ್ಲಿ ಅದನ್ನು ಉಸುರಿದನು. ಆ ಪಂಡಿತನಿಗೆ ಅದು ಸರಿ ಎನಿಸಿ, ಪಂಡಿತ ಮಂಡಳಿಗೆ ತಿಳಿಸಿದನು. ಪಂಡಿತರೆಲ್ಲ ಆ ಉತ್ತರವನ್ನು ಕೇಳಿ ಒಮ್ಮನಸ್ಸಿನಿಂದ ಒಪ್ಪಿದ್ದಲ್ಲದೆ, ಗದಾಧರನ ಬುದ್ಧಿಸಾಮರ್ಥ್ಯವನ್ನು ಕಂಡು ಬೆಕ್ಕಸಬೆರಗಾದರು.

೩. ಗದಾಧರನು ಶಾಲೆಗೆ ಹೋಗಿ ವಿದ್ಯಾಭ್ಯಾಸ ಮಾಡುವುದನ್ನು ನಿಲ್ಲಿಸಿದ. ಅದಕ್ಕೆ ಅವನು ನೀಡಿದ ಕಾರಣ, "ಈ ವಿದ್ಯೆಯೆಲ್ಲ ಕೇವಲ ಹೊಟ್ಟೆಪಾಡಿಗಾಗಿ, ಹೆಸರು ಕೀರ್ತಿಗಳ ಗಳಿಕೆಗಾಗಿ" ಎಂದು. ಸಾಮಾನ್ಯವಾಗಿ ಹುಡುಗರು ಸೋಮಾರಿತನದಿಂದಲೋ, ಬೌದ್ಧಿಕ ದೌರ್ಬಲ್ಯದಿಂದಲೋ ವಿದ್ಯಾಭ್ಯಾಸಕ್ಕೆ ವಿದಾಯ ಹೇಳುವುದು ಲೋಕದಲ್ಲಿ ಕಾಣಬರುವ ದೃಶ್ಯ. ಆದರೆ ಗದಾಧರನು ಭಗವಂತನನ್ನು ಕಾಣಲು ನೆರವಾಗುವ ವಿದ್ಯೆಯೇ ನಿಜವಾದ ವಿದ್ಯೆ ಎಂದು ಹೇಳುತ್ತಾನೆ; ಆ ಮೂಲಕ ಮುಂದೆ ಲೋಕಗುರುವಾಗುವ ಲಕ್ಷಣವನ್ನು ಈ ಸಂದರ್ಭದಲ್ಲಿ ತೋರ್ಪಡಿಸುತ್ತಾನೆ.

ಬಾಲ್ಯ ಕಳೆದು ಗದಾಧರನು ಯುವಕನಾದ. ಹಾಗೆಯೇ ಅವನು ಹಳ್ಳಿಯಿಂದ ಕೊಲ್ಕತಾ ನಗರಕ್ಕೆ ಬರುವಂತಾಯಿತು. ದಕ್ಷಿಣೇಶ್ವರದ ನೂತನ ಕಾಳೀ ಮಂದಿರದಲ್ಲಿ ಅರ್ಚಕನಾಗಿದ್ದ ತನ್ನ ಅಣ್ಣ ರಾಮಕುಮಾರನ ಜೊತೆಗೂಡಿದ. ಆ ದೇವಾಲಯದ ಮಾಲಿಕರು ವಿದ್ಯೆ, ಸ್ಥಾನಮಾನಗಳಿಂದ ಸಮಾಜದಲ್ಲಿ ಪ್ರತಿಷ್ಠಿತರಾದ ರಾಣಿ ರಾಸಮಣಿ ಮತ್ತು ಆಕೆಯ ಅಳಿಯ ಮಥುರನಾಥರೆಂಬ ಆಗರ್ಭ ಶ್ರೀಮಂತರು. ಹೆಚ್ಚಿನ ಅಧಿಕಾರ ಮತ್ತು ಮನ್ನಣೆಗಾಗಿ ಹಲ್ಲುಗಿಂಜುವುದು ಜನಸಾಮಾನ್ಯರ ಪಾಡು. ಆದರೆ ಗದಾಧರನಲ್ಲಿ ಆ ಸ್ವಭಾವವು ಲವಲೇಶವೂ ಇಲ್ಲದುದು ಅವನಿಗೆ ವಿಶೇಷ ಗಾಂಭೀರ್ಯವನ್ನು ನೀಡಿತ್ತು. ತೇಜಸ್ವಿಯಾದ ಗದಾಧರನು ಬಹುಬೇಗನೆ ರಾಸಮಣಿ ಮತ್ತು ಮಥುರನಾಥರ ಗಮನ ಸೆಳೆದನು. ಕಾಲಕ್ರಮದಲ್ಲಿ ಕಾಳಿಯ ಅರ್ಚಕನಾಗಿ ಮಥುರನಾಥನಿಂದಲೇ ನೇಮಿಸಲ್ಪಟ್ಟನು. ಅದೊಂದು ದೈವನಿಯಾಮಕವೆನ್ನಬೇಕು. ಅವರಿಬ್ಬರೂ ಶ್ರೀರಾಮಕೃಷ್ಣರನ್ನು ವಿಶೇಷವಾಗಿ ಪ್ರೀತಿಸುತ್ತಿದ್ದರು. ಶ್ರೀರಾಮಕೃಷ್ಣರ ದಿವ್ಯ ಗುರುಭಾವವನ್ನು ಕಂಡು, ಸರ್ವಸ್ವವನ್ನೂ ಅವರ ಪಾದಕ್ಕೆ ಸಮರ್ಪಿಸಿದ್ದರು.

ಶ್ರೀರಾಮಕೃಷ್ಣರಲ್ಲಿ ನಿಧಾನವಾಗಿ ಪ್ರಕಟವಾಗುತ್ತಿದ್ದ ಗುರುಭಾವವನ್ನು ಕುರಿತು ಸ್ವಾಮಿ ಶಾರದಾನಂದಜಿ ತಮ್ಮ 'ರಾಮಕೃಷ್ಣ ಲೀಲಾಪ್ರಸಂಗ' ವೆಂಬ ಉದ್ಗ್ರಂಥದಲ್ಲಿ ಹೀಗೆ ಬರೆಯುತ್ತಾರೆ: "ಶ್ರೀರಾಮಕೃಷ್ಣರು ತಮ್ಮ ಅಪಕ್ವ ಅಹಂಕಾರವನ್ನು ಸಂಪೂರ್ಣ ತ್ಯಜಿಸಿದ್ದರಿಂದ ವಿಶ್ವ ಅಹಂಕಾರ ಅಥವಾ ಶ್ರೀಜಗನ್ಮಾತೆಯ ಶಕ್ತಿ ಅವರ ಮೂಲಕ ಕೆಲಸಮಾಡಲು ಸಾಧ್ಯವಾಯಿತು. ಅವರು ಅಪಕ್ವ ಅಹಂಕಾರವನ್ನು ತ್ಯಜಿಸಿ ಅತ್ಯಂತ ದೀನಭಾವದಲ್ಲಿ ಇದ್ದುದರಿಂದಲೇ ಶ್ರೀಜಗನ್ಮಾತೆಯ ಗುರುಶಕ್ತಿಯು ಅವರ ಮೂಲಕ ಪ್ರಕಟಗೊಳ್ಳಲು ಸಾಧ್ಯವಾಯಿತು. ಈ ರೀತಿ ಅಹಂಕಾರದ ತ್ಯಾಗದ ನಂತರವೇ ಗುರುಭಾವ ಅಥವಾ ಗುರುಶಕ್ತಿಯು ಪ್ರಕಟಗೊಳ್ಳುತ್ತದೆ ಎಂಬುದು ಜಗತ್ತಿನ ಎಲ್ಲ ಅವತಾರಪುರುಷರ ಜೀವನದಲ್ಲಿಯೂ ಕಂಡುಬರುವ ವಿಷಯ" (*ಶ್ರೀರಾಮಕೃಷ್ಣ ಲೀಲಾಪ್ರಸಂಗ*, ಭಾಗ ೧, ಪುಟ ೪೨೪).

ಒಂದಾನೊಂದು ದಿನ ರಾಣಿ ರಾಸಮಣಿಯು ಕಾಳೀಮಂದಿರಕ್ಕೆ ಭೇಟಿಯಿತ್ತಳು. ಗಂಗಾಸ್ನಾನದ ನಂತರ ದೇವಿಯ ಸಮ್ಮುಖದಲ್ಲಿ ಆಸೀನಳಾದ ಅವಳು ತನ್ನ ಉಪಾಸನೆಯನ್ನು ಮುಗಿಸಿ, ಬಳಿಯಲ್ಲೇ ಇದ್ದ ಪೂಜಾರಿ ರಾಮಕೃಷ್ಣರಿಗೆ ಕೆಲವು ಹಾಡುಗಳನ್ನು ಹಾಡುವಂತೆ ಕೇಳಿಕೊಂಡಳು. ರಾಮಕೃಷ್ಣರು ದೇವಿಯನ್ನು ಕುರಿತ ಹಾಡುಗಳನ್ನು ಹಾಡತೊಡಗಿದರು. ರಾಣಿಯು ಬಹಳ ಭಕ್ತಿಯಿಂದ ಕೇಳುತ್ತಿದ್ದಂತೆ ಕಾಣುತ್ತಿತ್ತು. ಮಂದಿರದ ಒಳಹೊರಗೆ ರಾಣಿಯ ಸೇವಕರು, ಮಂದಿರದ ಅಧಿಕಾರಿಗಳು ಸೇರಿದ್ದರು. ಕೆಲ ಸಮಯದ ನಂತರ ಶ್ರೀರಾಮಕೃಷ್ಣರು ಹಟಾತ್ತನೆ ಹಾಡುವುದನ್ನು ನಿಲ್ಲಿಸಿದರು. ರಾಣಿಯ ಬಳಿ ಸಾರಿ ಆಕೆಯ ಕೆನ್ನೆಗೆ ಒಂದೇಟು ಬಾರಿಸಿ, "ಇಲ್ಲಿಯೂ ಅದೇ ಚಿಂತೆಯೇ?" ಎಂದು ಉದ್ಗರಿಸಿದರು. ಕೂಡಲೇ ಮಂದಿರದಲ್ಲೆಲ್ಲ ಕೋಲಾಹಲ ಉಂಟಾಯಿತು. "ಹಿಡಿಯಿರಿ, ಹಿಡಿಯಿರಿ ಅವನನ್ನು"